ಬದಲಾಯಿಸಿದನೆಂದು ಗೊತ್ತಾಯಿತು. ಫೋನ್ ನಂಬರ್ ಕೂಡ ಬದಲಾಗಿತ್ತು. ಆಮೇಲೆ ಅವನ ಭೇಟಿಯಾದದ್ದು ಇಂದೇ. ಈಗ ಅವನಿಗೆ ಸುಮಾರು ಅರವತ್ತೈದು ಇದ್ದಿಬಹುದು. ತುಸು ಬಾಗಿದ್ದಾನೆ. ಆದರೆ ಮಾತು... ನಡುವಳಿಕೆ... ನಂಬಿಕೆ ಅದೇ. ವ್ಯತ್ಯಾಸವಿಲ್ಲ. 'ಬೋಂಡಾ... ಬೋಂಡಾ...' ಎಂದು ಕೂಗು ಕೇಳಿಬಂದಾಗ ಬಂದಾಗ ಅವನ ನೆನಪಿನ ಗುಂಗಿನಿಂದ ಎಚ್ಚೆತ್ತೆ. ಆಗಲೇ ಲೋಂಡಾ ಬಂದಿತ್ತು. ಈಗಲೇ ಊಟ ಮಾಡಿಬಿಡಬೇಕು. ಇಲ್ಲವಾದರೆ ಮುಂದೆ ಜನಜಾತ್ರೆ ಆರಂಭವಾಗುತ್ತದೆ ಎಂದುಕೊಂಡು ಊಟ ಮುಗಿಸಿದೆ. ಅಂದು ಮಲಗಿದರೂ ಅನ್ವರ್‌ನದೇ ಕನಸು. ವಿಚಿತ್ರ ಬಂಧಗಳು. ಆತ್ಮೀಯತೆಯ ಬೆಸುಗೆ. ನಂಬಿಕೆಯ ಭದ್ರ ಬುನಾದಿ. ಮಾಮರವೆಲ್ಲೋ... ಕೋಗಿಲೆಯೆಲ್ಲೋ... ಏನೀ ಸ್ನೇಹ ಸಂಬಂಧ? ಎಲ್ಲಿಯದೂ ಈ ಅನುಬಂಧ?' ಎಂಬ ವಿಷ್ಣುವರ್ಧನ ಅಭಿನಯಿಸಿದ ಪ್ರಖ್ಯಾತ ಚಿತ್ರಗೀತೆ ಜ್ಞಾಪಕಕ್ಕೆ ಬಂದಿತ್ತು. ನಿಜ... ಇವು ಕರುಳಬಳ್ಳಿಯ ಸಂಬಂಧಗಳಲ್ಲ. ನಮ್ಮ ನಿತ್ಯ ಜೀವನಕ್ಕೆ ಅವಶ್ಯಕವಾದ ಮಲ್ಲಿಗೆ ಬಳ್ಳಿಯ ಅನುಬಂಧಗಳು. ಸದಾ ಹಸಿರು... ಸುವಾಸಿತ...

ಮರುದಿನ ಬೆಂಗಳೂರು ಮುಟ್ಟಿದಾಕ್ಷಣ ಅನ್ವರ್‌ನಿಗೆ ಫೋನ್ ಮಾಡಲು ಮರೆಯಲಿಲ್ಲ. 'ಆರಾಮ ಮುಟ್ಟೇನಪಾ'ಎಂದೆ. ಅವನೂ ಸಣ್ಣ ನಗುವಿನೊಂದಿಗೆ 'ಛೊಲೊ ಆತ್ರಿ. ನಿಶ್ಚಿಂತ್ಯಾತು' ಎಂದಿದ್ದ. ಆಗಲೇ ಚಿಕ್ಕಮಗಳೂರು ಟ್ರಿಪ್ಪಿಗೆ ಎಲ್ಲರೂ ಸಿದ್ಧರಾಗಿದ್ದರು. ಮಧ್ಯಾಹ್ನ ಸಂತೋಷದಿಂದಲೇ ಎಲ್ಲ ಹೊರಟೆವು. ಮರುದಿನ ಬಾಬಾಬುಡನ್‌ಗಿರಿ ನೋಡುವ ಕಾರ್ಯಕ್ರಮವಿತ್ತು. ನೀಲಕುರಿಂಜಿ ಹೂಗಳ ಸಾಲಿನಲ್ಲಿ ಮೀಯುವ ಹಂಬಲ. ಕಾರು ಬಾಬಾಬುಡನ್‌ಗಿರಿಯ ದಾರಿ ತುಳಿದಾಗಲೇ ಅನ್ವರ್‌ನ ಸ್ನೇಹಿತ ಖಾನೋಲ್ಕರನ ಫೋನ್ ಬಂದಿತ್ತು. 'ನಿಮಗ ಸುದ್ದಿ ಗೊತ್ತಾತಿಲ್ರಿ? ನಿನ್ನೆ ರಾತ್ರಿ ಅನ್ವರ್ ಸತ್ತನ್ರಿ... ಜೋಡಿ ಅವನ ಮಗಾನೂ ಸತ್ತ'ಎಂದ. ಆಘಾತಗೊಂಡಿದ್ದೆ ನಾನು. 'ಅಯ್ಯೋ... ಏನಾತೋ? ನಾ ನಿನ್ನೆರೆ ಮಾತಾಡೀನಲಾ... ಮೊನ್ನೆರೆ ನನ್ನ ಸ್ಟೇಷನ್‌ಕ್ಕ ಬಿಟ್ಟಾನ' ಎಂದು ಗದ್ಗದ ಕಂಠದಿಂದ ಹೇಳಿದೆ. 'ಜಾರಿ ಬಿದ್ದಾದಾಗ ಬಿದ್ದನಂತ್ರಿ. ಮೈತುಂಬ ಪೆಟ್ಟಾಗಿತ್ರಿ. ಒಳಗಿನ ಕಥಿ ನಿಮಗ ಗೊತ್ತಿಲ್ರಿ ವೈನಿ. ನಿಮಗ್ಯಾಕ ಹೇಳಬೇಕಂತ ಅವನೂ ಹೇಳಿಲ್ಲರಿ. ಅವನ ಮಗಾ ಅಡ್ಡಹಾದಿ ಹಿಡದಾನ. ಒಂಟಿ ಹೆಣಮಕ್ಕಳನ್ನ ಮನಿಗೆ ಕರಕೊಂಡು ಬಂದು ಬಂಗಾರ ಕಸಗೊಂಡು ಅವರ್ನ ಕೆಟ್ಟ ಹಾದಿಗೆ ಹಚ್ಚತಾನ್ರಿ. ಎಷ್ಟೋ ಹೆಣಮಕ್ಕಳ ಬಾಳೆ ಹಾಳ ಮಾಡ್ಯಾನ್ರಿ. ಅನ್ವರ್ ಭಾಳ ಛೊಲೊ ಮನಶಾ. ಮಗಗಾ ಬೈದು ಹೊಡದು ಬೇಕಾದಷ್ಟು ಬುದ್ಧಿ ಹೇಳಿದಾ. ಅಂವಾ... ಅಂವನ ಗೆಳ್ಯಂದ್ರು ಕೇಳಲೇ ಇಲ್ಲ. ಆಮ್ಯಾಲೆ ಅನ್ವರ್ ನೋಡಿದಾಗೆಲ್ಲಾ ಹೆಣಮಕ್ಕಳನ್ನ ಪಾರು ಮಾಡಿ ಮನಿಗೆ ಬಿಟ್ಟು ಬರ್ತಿದ್ದಾ. ಮನ್ಯಾಗ ಝಗಳ ಆಗತಿತ್ತು. ಕೈ... ಕೈ... ಹಚ್ಚಿ ಹೊಡದಾಟ. ಅಪ್ಪನ್ನ ಹೊಡೀತಿದ್ದಾರಿ ಅನ್ವರನ ಮಗಾ. ಅವನ ಹೆಂಡ್ತಿ ರುಕ್ಸಾನಾಗ ನೆನಪಿನ ಶಕ್ತಿ ಹೋಗಿಬಿಟ್ಟದರಿ. ಕೆಲವೊಮ್ಮೆ ಗಂಡ, ಮಗನ್ನ ಗುರುತು ಹಿಡಿಯೂದುಲ್ಲರಿ. ಹಿಂಗೆಲ್ಲಾ ಆಗಿ ಭಾಳ ತ್ರಾಸಾಗಿತ್ತು ನೋಡ್ರಿ. ನಿನ್ನೆ ಇಬ್ಬರಿಗೂ ಜೋರ ಹೊಡದಾಟ ಆಗೇದಂತ್ರಿ. ಏನ ಖರೇನೊ... ಏನ ಸುಳ್ಳೋ ಯಾಂವಬಲ್ಲರಿ. ಅನ್ವರ್‌ಗ ಪೆಟ್ಟಾಗಿ ಗಾಯ ಆಗಿದ್ದು. ಮಗನ ತಲಿ ಕಲ್ಲಿಗೆ ಬಡದು ರಕ್ತ ಹೋಗಿ ಸತ್ತರಿ. ನೀವು ಅಂವಗ ಭಾಳ ಬೇಕಾದಾವ್ರು. ನಿಮ್ಮ ಬಗ್ಗೆ ಭಾಳ ಹೇಳ್ತಿದ್ದ. ನಿಮ್ಮ ನಂಬರ್ ಕೊಟ್ಟಿದ್ದ. ಅದಕ್ಕ ನಿಮಗ ಫೋನ್ ಮಾಡಿ ಹೇಳಿದೆರಿ' ಎನ್ನುತ್ತ ಫೋನ್ ಕಟ್ ಮಾಡಿದ.

ದಿಗ್ಭ್ರಮೆಗೊಂಡು ಕುಳಿತೇ ಇದ್ದೆ ನಾನು. ಹಾಗಾದರೆ 'ಆ ಹುಡುಗ... ಆ ಮನೆ...' ಥರಥರ ನಡುಗಿದೆ. ಅನ್ವರ್ ಮಗನನ್ನೂ ಕೊಂದು ತಾನೂ ಆಹುತಿಯಾದನೆ? ನನ್ನನ್ನು ಪಾರು ಮಾಡಿದ್ದಕ್ಕೆ ದೊರೆತ ಪ್ರತಿಫಲವೇ? ನನಗಾಗಿ ಜೀವ ತೆತ್ತನೆ? ಗೊತ್ತಿಲ್ಲ. ಮನ ದುಃಖದ ಕಡಲಾಯಿತು. ಎಲ್ಲರೂ ನೀಲಕುರಿಂಜಿ ಹೂಗಳ ಸಂಭ್ರಮದಲ್ಲಿ ಮೀಯುತ್ತಿದ್ದರೆ ನಾನು ಶೋಕಸಾಗರದಲ್ಲಿ ಮುಳುಗಿ ಗರ ಬಡಿದವರಂತೆ ನಿಂತುಕೊಂಡಿದ್ದೆ. ಹೊಟ್ಟೆಯಲ್ಲಿ ವಿಚಿತ್ರ ತಳಮಳ. ಮನದ ಅಂಗಳದಲ್ಲಿ ಅನ್ವರ್ ನೆನಪುಗಳು... ಮುಂದೆ ಓಡಿದ ಕಾರು ಇಮಾಂ ದತ್ತಪೀಠದ ಬಳಿಯಲ್ಲೇ ನಿಂತಿತು. ಒಳಗೆ ನಡೆಯುತ್ತ ಗುಹೆಯೊಳಗೆ ಹೋಗಿ ದತ್ತಾತ್ರೇಯರ ಪಾದುಕೆಗಳಿಗೆ ನಮಿಸಿದೆ. ಇಮಾಂ ಸಾಬರ ದರ್ಗಾಕ್ಕೆ ಕೈಮುಗಿದು, 'ಅನ್ವರ್‌ನಿಗೆ ಸದ್ಗತಿ ಕೊಡು'ಎಂದು ಬೇಡಿಕೊಂಡೆ. ಕಣ್ಣಹನಿಗಳು ಉರುಳುತ್ತಲೇ ಇದ್ದವು... ಸಾಲಾಗಿ...

●